ದಿನಾಂಕ **: 24.02.2026** ರಂದು ಡಿಡಬ್ಲ್ಯೂ - 4 ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

<u>ಪಾಟೀ ಸವಾಲುಃ</u> ಶ್ರೀ ಎಂ.ಕೆ.ವಿ.ಟಿ., 1 ನೇ ಪ್ರತಿವಾದಿ ಪರ ವಕೀಲರಿಂದಃ

2 ನೇ ಪ್ರತಿವಾದಿ ಅಂದರೆ ನನ್ನ ತಾಯಿಯ ತಂದೆಯ ಹೆಸರು ಶಾಂತಿರಾಜ ಪಾಂಡಿ. ಅವರಿಗೆ ಇಬ್ಬರು ಪತ್ನಿಯರು ಎಂದರೆ ಸರಿ. ಮೊದಲನೆ ಪತ್ನಿಯ ಹೆಸರು ಶ್ರೀಮತಿ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿಗೆ ತಿಳಿದಿರುತ್ತದೆ. ನನ್ನ ತಾಯಿಯ ತಾಯಿ ಅಂದರೆ ಶಾಂತಿರಾಜ ಪಾಂಡಿಯವರ 2 ನೇ ಹೆಂಡತಿಯವರ ಹೆಸರು ಪದ್ಮಾವತಿ. ಶಾಂತಿರಾಜ ಪಾಂಡಿಯವರ ಮೊದಲನೇ ಹೆಂಡತಿಯಿಂದ ಇಬ್ಬರು ಮಕ್ಕಳಿದ್ದು, ಅವರ ಹೆಸರು ಮಂಜಪ್ಪ ಮಾಸ್ಟರ್ ಮತ್ತು ಲಲಿತ ಎಂದರೆ ಸರಿ. ಮಂಜಪ್ಪ ಮಾಸ್ಟರ್ ರವರಿಗೆ ಇಬ್ಬರು ಮಕ್ಕಳಿದ್ದು, ಅವರ ಹೆಸರು ನವೀನ್ ಮತ್ತು ನಂದಾ. ಮಂಜಪ್ಪ ಮಾಸ್ಟರ್ ರವರ ಹೆಂಡತಿಯ ಹೆಸರು ನೀಲಿ. ಲಲಿತ ರವರಿಗೆ 4 ಜನ ಮಕ್ಕಳಿದ್ದು, ಅವರ ಹೆಸರು ಜಯರಾಜ್, ಜಿನೇಂದ್ರ, ವಿಜಯ ಮತ್ತು ರೂಪ. ಶಾಂತಿರಾಜ ಪಾಂಡಿಯವರ ಮೊದಲನೇ ಹೆಂಡತಿಯ ವಾರೀಸುದಾರರಿಗೆ ಜಿನ್ನಪ್ಪ ಹೆಗ್ಗಡೆಯವರ ಸ್ವತ್ತುಗಳಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿ. ಅವರುಗಳಿಗೆ ಹಕ್ಕು ಇರುವುದಿಲ್ಲ ಎಂದು ನನ್ನ ತಾಯಿಗೂ ಸಹಾ ತಿಳಿದಿರುತ್ತದೆ. ಇದೆಲ್ಲಾ ವಿಚಾರ ತಿಳಿದಿದ್ದರೂ

ಸಹಾ ಅವರಿಗೂ ಹಕ್ಕು ಇರುತ್ತದೆ ಎಂದು ನನ್ನ ತಾಯಿ ಈ ಪ್ರಕರಣದಲ್ಲಿ ಮಧ್ಯಂತರ ಅರ್ಜಿ 26 ನ್ನು ಸಲ್ಲಿಸಿ, ಪ್ರಕರಣವನ್ನು ತಡ ಮಾಡಲು ಪ್ರಯತ್ನಿಸಿದ್ದರು ಎಂದರೆ ಸರಿಯಲ್ಲ.

ನನ್ನ ತಂದೆಯ ತಾಯಿಯ ಹೆಸರು ಮತ್ತು ನನ್ನ ತಾಯಿಯ ತಾಯಿಯ ಹೆಸರು ಪದ್ಮಾವತಿ ಎಂದರೆ ಸರಿ. ನನ್ನ ತಾಯಿಯ ತಾಯಿ ಬಂಟ್ವಾಳದ ತಾಲೂಕಿನ ಸಿದ್ದಕಟ್ಟೆ ಗ್ರಾಮದವರು. ಮನೆತನದ ಹೆಸರು ಪಿಲ್ಲಮ್ ಎಂದಿರುತ್ತದೆ. ನನ್ನ ತಾಯಿಗೆ, ನನ್ನ ಸಹೋದರಿ ಮತ್ತು ಅವರ ಮಕ್ಕಳಿಗೆ ಅದೇ ಅಳಿಯ ಸಂತಾನ ಕುಟುಂಬವಾಗಿರುತ್ತದೆ. ಸದರಿ ಮನೆತನಕ್ಕೆ ಹೆಗ್ಗಡೆ ಎಂದು ಕರೆಯುತ್ತಾರೆ ಎಂದರೆ ಈ ದಾವೆಗೂ ಸದರಿ ಸ್ವತ್ತುಗಳಿಗೂ ಸಂಬಂಧ ಇರುವುದಿಲ್ಲ. ಆ ಮನೆತನದಲ್ಲಿ ಸಾವಾದರೆ ನಮಗೆ ಸೂತಕ ಎಂದರೆ ಅದಕ್ಕೂ ಈ ಪ್ರಕರಣಕ್ಕೂ ಸಂಬಂಧ ಇರುವುದಿಲ್ಲ. ಮುಂದುವರಿದು ನಮಗೆ ಸೂತಕ ಬರುತ್ತದೆ ಎಂದು ನುಡಿಯುತ್ತೇನೆ. ಪಿಲ್ಲಮ್ ಕುಟುಂಬದ ಸ್ವತ್ತುಗಳು ಪಾಲಾಗಿರುತ್ತದೆಯೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕುಟುಂಬದಿಂದ ನನಗೆ ಸಿಕ್ಕಂತಹ ಪಾಲನ್ನು ಮಾರಾಟ ಮಾಡಿದ್ದರೂ ಸಹಾ ನಾನು ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಂದೆಯವರ ಅಳಿಯ ಸಂತಾನ ಕುಟುಂಬದ ಉಪನಾಮ ಪಾಂಡಿ ಎಂದರೆ ಸರಿ. ಅದು ಗುಡ್ಡನಬೆಟ್ಟು ಅಳಿಯ ಸಂತಾನ ಕುಟುಂಬದ ಸ್ವತ್ತುಗಳು ಎಂದರೆ ಅಳಿಯ ಸಂತಾನ ಕುಟುಬಂದ್ದೋ ಅಲ್ಲವೋ ಎಂದು ನನಗೆ ತಿಳಿದಿಲ್ಲ. ನಾನು ಗುಡ್ಡನ ಬೆಟ್ಟು ಅಳಿಯ ಸಂತಾನ ಕುಟುಂಬಕ್ಕೆ ಸೇರಿದವನಾಗಿರುವುದಿಲ್ಲ ಎಂದರೆ ಸರಿ. ಈಗ ನನಗೆ ಮೂಡಬಿದ್ರೆ ನ್ಯಾಯಾಲಯದಲ್ಲಿ ನನ್ನ ದೊಡ್ಡಪ್ಪ ಅಂದರೆ 1 ನೇ ಪ್ರತಿವಾದಿ ಸಲ್ಲಿಸಿರುವ ವಾದ ಪತ್ರದ ಪ್ರತಿಯನ್ನು ತೋರಿಸಿದ್ದು, ಅದನ್ನು ಒಪ್ಪಿಕೊಂಡಿದ್ದು, ನಿಡಿ - 21 ಎಂದು ಗುರುತಿಸಲಾಯಿತು. ಸದರಿ ಪ್ರಕರಣಕ್ಕೂ ಈ ಪ್ರಕರಣಕ್ಕೂ ಸಂಬಂಧ ಇರುವುದಿಲ್ಲ. ಅದರಲ್ಲಿ ನಾವು ಸಲ್ಲಿಸಿರುವ ಪ್ರತಿವಾದ ಪತ್ರವನ್ನು ಒಪ್ಪಿಕೊಂಡಿದ್ದು, ಅದನ್ನು ನಿಡಿ - 22 ಎಂದು ಗುರುತಿಸಲಾಯಿತು. ಸದರಿ ಪ್ರಕರಣದಲ್ಲಿನ ಆರ್ಡರ್ ಶೀಟ್ ಮತ್ತು ನನ್ನ ವಕಾಲತ್ ನ ಪ್ರತಿಯನ್ನು ತೋರಿಸಿದ್ದು, ಅದನ್ನು ಒಪ್ಪಿಕೊಂಡ ಕಾರಣ, ಅದನ್ನು ಕ್ರಮವಾಗಿ ನಿಡಿ - 23 ಮತ್ತು ನಿಡಿ - 24 ಎಂದು ಗುರುತಿಸಲಾಯಿತು. ಮೂಡಬಿದ್ರೆ ನ್ಯಾಯಾಲಯದಲ್ಲಿ ನಾವು ಸಲ್ಲಿಸಿರುವ ಅಸಲು ದಾವೆ 155/2019 ರ ವಾದ ಪತ್ರದ ಪತ್ರದ ದೃಢೀಕೃತ ನಕಲು, ಎರಡು ವಕಾಲತ್ ಗಳ ದೃಢೀಕೃತ ನಕಲುಗಳು ಮತ್ತು ಸಿಸಿ 261/2019 ರ ವಕಾಲತ್ ನ ದೃಢೀಕೃತ ನಕಲನ್ನು ಕ್ರಮವಾಗಿ ನಿಡಿ - 25 ರಿಂದ ನಿಡಿ - 28 ಎಂದು ಗುರುತಿಸಲಾಯಿತು. ಮೂಡಬಿದ್ರೆ ನ್ಯಾಯಾಲಯದಲ್ಲಿರುವ ಪ್ರಕರಣಕ್ಕೂ ಮತ್ತು ಜಿನ್ನಪ್ಪ ಹೆಗ್ಗಡೆಯವರಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ನಾನು ಮೂಡಬಿದ್ರೆ ನ್ಯಾಯಾಲಯದ ಪ್ರಕರಣದ ಬಗ್ಗೆ ಮಾತನಾಡಲು

ಆಗುವುದಿಲ್ಲ. ಸದರಿ ಪ್ರಕರಣದಲ್ಲಿರುವ ಸ್ವತ್ತುಗಳು ಅಳಿಯ ಸಂತಾನ ಕುಟುಂಬಕ್ಕೆ ಸೇರಿದ್ದು, ಜಿನ್ನಪ್ಪ ಹೆಗ್ಗಡೆಯವರ ಸ್ವತ್ತುಗಳಿಗೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಕಣ್ತಪ್ಪಿ ನಿಂದ ಜಿನ್ನಪ್ಪ ಪಾಂಡಿ ಎಂದು ನಮೂದಾಗಿದ್ದು, ಜಿನ್ನಪ್ಪ ಪಾಂಡಿ ಎಂದು ಯಾರೂ ಇರುವುದಿಲ್ಲ. ಆದರೆ ಜಿನರಾಜ ಪಾಂಡಿ ಎಂದು ಇದ್ದು, ಅವರು ನನ್ನ ತಂದೆಯ ತಾಯಿಯ ಸಹೋದರ ಆಗಿರುತ್ತಾರೆ. ಅಂದರೆ ನನ್ನ ತಂದೆಯ ಸೋದರ ಮಾವನಾಗಿರುತ್ತಾರೆ. ಜಿನ್ನಪ್ಪ, ಜಿನರಾಜ, ಜಿನೇಂದ್ರ , ಜಿನೇಶ ಎನ್ನುವುದು ಜೈನ ಸಮುದಾಯದಲ್ಲಿ ಸಾಮಾನ್ಯ ಹೆಸರಾಗಿರುತ್ತದೆ ಎಂದರೆ ಸರಿ. ಒಬ್ಬರನ್ನೊಬ್ಬರು ಮಾತನಾಡಿಸುವಾಗ ಜೈಜಿನೇಂದ್ರ ಎಂದು ಕರೆಯುತ್ತಾರೆ ಎಂದರೆ ಸರಿ. ಅವುಗಳು ಜಿನ ದೇವರ ಬೇರೆ ಬೇರೆ ಹೆಸರುಗಳು ಎಂದರೆ ಸರಿ. ಈ ಹೆಸರುಗಳು ಬೇರೆ ಸಮುದಾಯದಲ್ಲಿ ಸಾಮಾನ್ಯವಾಗಿ ಕಂಡು ಬರುವುದಿಲ್ಲ ಎಂದರೆ ಸರಿ.

ನನ್ನ ತಂದೆಯ ತಂದೆ ಜಿನ್ನಪ್ಪ ಹೆಗ್ಗಡೆ ಮತ್ತು ಪದ್ಮಾವತಿಯವರಿಗೆ ಒಟ್ಟು 6 ಜನ ಮಕ್ಕಳು. ಅವರ ಹೆಸರು ಲಕ್ಷ್ಮಿ , 1 ನೇ ಪ್ರತಿವಾದಿಯಾದ ನಮೀರಾಜ ಪಾಂಡಿ, ಸುಮನಾಜಿ, ರತ್ನಮ್ಮ, ಸರಸ್ವತಿ ಮತ್ತು ನನ್ನ ತಂದೆ ಶ್ರೀಧರ ಪಾಂಡಿ. ನನ್ನ ತಂದೆಗೂ ಮತ್ತು 1 ನೇ ಪ್ರತಿವಾದಿಗೂ ಅಂದಾಜು 15 ವರ್ಷಗಳ ಅಂತರವಿರಬಹುದು. ನನ್ನ ಅಜ್ಜ ಜಿನ್ನಪ್ಪ ಹೆಗ್ಗಡೆಯವರು ಕೊಲೆಯಾದ

ಸಮಯದಲ್ಲಿ ಅವರೆಲ್ಲರೂ ಅಪ್ರಾಪ್ತ ವಯಸ್ಕರಾಗಿದ್ದರು. ಅವರು 1953 ನೇ ಇಸವಿಯಲ್ಲಿ ಮರಣ ಹೊಂದಿದ್ದಾರೆ ಎಂದರೆ ಸರಿ. ನನ್ನ ಲಿಖಿತ ಹೇಳಿಕೆಯಲ್ಲಿ ಜಿನ್ನಪ್ಪ ಹೆಗ್ಗಡೆಯವರು 1957 ರಲ್ಲಿ ಮರಣ ಹೊಂದಿದ್ದಾರೆ ಎಂದು ತಿಳಿಸಿದ್ದು, ಅದು ತಪ್ಪಾಗಿರುತ್ತದೆ. ಅವರು 1953 ರಲ್ಲಿ ಮರಣ ಹೊಂದಿದ್ದಾರೆ.

ಜಿನ್ನಪ್ಪ ಹೆಗ್ಗಡೆಯವರ ಮಕ್ಕಳ ಪೈಕಿ ಮೊದಲು ಯಾರು ಮದುವೆಯಾಗಿದ್ದು ಎಂದು ನನಗೆ ತಿಳಿದಿಲ್ಲ. ನನ್ನ ತಾಯಿಗೆ ತಿಳಿದಿರಬಹುದು. ಈಗ ನನ್ನ ತಂದೆಯ ಮದುವೆಯ ಫೋಟೋವನ್ನು ತೋರಿಸಿದ್ದು, ಅದನ್ನು ನಿಡಿ - 29 ಎಂದು ಗುರುತಿಸಲಾಯಿತು. ಈಗ ಇನ್ನೊಂದು ಫೋಟೋವನ್ನು ತೋರಿಸಿದ್ದು, ಅದರ ಪ್ರಕಾರ 1 ನೇ ಪ್ರತಿವಾದಿ , ನನ್ನ ತಾಯಿ ಮತ್ತು 2 ನೇ ವಾದಿ ಸರಸ್ವತಿಯವರು ಒಂದೇ ದಿನ ಮದುವೆಯಾಗಿದ್ದು ಕಂಡು ಬರುತ್ತದೆ ಎಂದರೆ ಸರಿ. ಸದರಿ ಫೋಟೋವನ್ನು ನಿಡಿ - 30 ಎಂದು ಗುರುತಿಸಲಾಯಿತು. ನನ್ನ ತಂದೆಯ ತಾಯಿ ಪದ್ಮಾವತಿಯವರನ್ನು ನಾನು ನೋಡಿದ ನೆನಪು ಇರುವುದಿಲ್ಲ. ಈಗ ನನಗೆ ಮತ್ತೊಂದು ಫೋಟೋವನ್ನು ತೋರಿಸಿದ್ದು, ಅದರಲ್ಲಿ ನನ್ನ ತಾಯಿಯ ತಂದೆ ಶಾಂತಿರಾಜ ಪಾಂಡಿ ಮತ್ತು ಜಿನರಾಜ ಪಾಂಡಿಯವರು ಕಂಡು ಬರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿಯವರಿಗೆ ಗೊತ್ತಾಗುತ್ತದೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಯ ತಾಯಿ ಮರಣ ಹೊಂದುವಾಗ ನನಗೆ ಸುಮಾರು 5 ವರ್ಷ.

ಅವರ ಅಭಿಷೇಕ ಎಲ್ಲಿ ಆಗಿದೆ ಎಂದು ನನಗೆ ತಿಳಿದಿಲ್ಲ. ನನ್ನ ತಾಯಿಗೆ ತಿಳಿದಿರಬಹುದಾ ಎಂದರೆ ನನಗೆ ಹೇಳಲು ಆಗುವುದಿಲ್ಲ.

ನಾನು ವಿಡಿಯೋ ಎಡಿಟಿಂಗ್ ಕೆಲಸವನ್ನು ಬೆಂಗಳೂರಿನಲ್ಲಿ ಕಲಿತ್ತಿದ್ದೇನೆ. ಮೊದಲು ವಿಡಿಯೋ ಎಡಿಟಿಂಗ್ ನ್ನು ಬೆಳುವಾಯಿ ಮತ್ತು ಕೈಕಂಬದಲ್ಲಿ ಸ್ಟುಡಿಯೋ ಇಟ್ಟುಕೊಂಡು ಸುಮಾರು 5 – 6 ವರ್ಷಗಳ ಕಾಲ ಮಾಡುತ್ತಿದ್ದೆ. ನಂತರ ಬೆಂಗಳೂರಿನಲ್ಲಿ ಕಂಪನಿಯಲ್ಲಿ ಸುಮಾರು 9 ವರ್ಷಗಳ ಕಾಲ ಕೆಲಸ ಮಾಡಿದ್ದೇನೆ. ಈಗ ಮುಂಬೈನಲ್ಲಿ ಅಂದಾಜು 7 - 8 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ನನ್ನ ಸಹೋದರಿ ಗುಮ್ಮಟ ಬೆಟ್ಟದ ಹಿಂದೆ ಮನೆ ಕಟ್ಟಿಕೊಂಡು ವಾಸವಾಗಿದ್ದಾರೆ. ನನ್ನ ತಾಯಿ ಇರ್ವತ್ತೂರಿನ ನಮ್ಮ ಐದೊಟ್ಟು ಮನೆಯಲ್ಲಿ ವಾಸವಾಗಿದ್ದಾರೆ. 1 ನೇ ಪ್ರತಿವಾದಿಯ ವಿಚಾರಣೆಯಾಗುವ ಸಮಯದಲ್ಲಿ ಅವರ ಮನೆಗೆ ನನ್ನ ತಾಯಿ ಬಂದಿದ್ದರು. ಅಲ್ಲದೇ 1 ನೇ ಪ್ರತಿವಾದಿಯ ಪರ ಸಾಕ್ಷಿದಾರರಾದ ಡಿಡಬ್ಲ್ಯೂ 2 ಮತ್ತು ಡಿಡಬ್ಲ್ಯೂ 3 ರವರ ವಿಚಾರಣೆಯ ಸಮಯದಲ್ಲೂ ನನ್ನ ತಾಯಿ ನ್ಯಾಯಾಲಯಕ್ಕೆ ಬಂದಿದ್ದರು. ನೆನ್ನೆ ಕ್ರಿಮಿನಲ್ ಪ್ರಕರಣದಲ್ಲೂ ಸಹಾ ನನ್ನ ತಾಯಿ ಹಾಜರಿದ್ದರು. ಈಗ ನನಗೆ ತೋರಿಸಿದ ನಿಡಿ - 28 ವಕಾಲತ್ ನಾಮೆಯು ಸದರಿ ಕ್ರಿಮಿನಲ್ ಪ್ರಕರಣದಲ್ಲಿ ನೀಡಲಾಗಿದೆ ಎಂದರೆ ಸರಿ.

ಈ ಪ್ರಕರಣದಲ್ಲಿ ನನ್ನನ್ನು ಮತ್ತು ನನ್ನ ಸಹೋದರಿಯನ್ನು ನನ್ನ ತಾಯಿ ಪ್ರತಿನಿಧಿಸಬೇಕು ಎಂದು ಮಧ್ಯಂತರ ಅರ್ಜಿ ಸಂಖ್ಯೆ 21 ಸಲ್ಲಿಸಿದ್ದೆವು ಎಂದರೆ ಸರಿ. ಎಲ್ಲಾ ವಿಚಾರಗಳು ನನ್ನ ತಾಯಿಯವರಿಗೆ ತಿಳಿದಿದ್ದು, ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ನ್ಯಾಯಾಲಯಕ್ಕೆ ಹಾಜರಾದಲ್ಲಿ ಸತ್ಯವಿಚಾರಗಳು ಹೊರಬರುತ್ತದೆ ಎನ್ನುವ ಕಾರಣದಿಂದ ಅವರನ್ನು ನ್ಯಾಯಾಲಯಕ್ಕೆ ಬರದಂತೆ ತಡೆ ಹಿಡಿದಿದ್ದೇವೆ ಎಂದರೆ ಸರಿಯಲ್ಲ.

ನಾನು ಇರ್ವತ್ತೂರು ಶಾಲೆಯಲ್ಲಿ ಓದಿದ್ದೇನೆ. 10 ನೇ ತರಗತಿಯನ್ನು ಬೆಳುವಾಯಿಯ ಕೆಸರುಗದ್ದೆ ಊರಿನಲ್ಲಿ ಓದಿದ್ದೇನೆ. ಸದರಿ ಶಾಲೆಗಳಿಗೆ ನಮ್ಮ ಐದೊಟ್ಟು ಮನೆಯಿಂದ ಓಡಾಡುತ್ತಿದ್ದೆ. ಪಿ.ಯು.ಸಿ.ಯನ್ನು ಮೂಡಬಿದ್ರಿಯ ಜೈನ್ ಜೂನಿಯರ್ ಕಾಲೀಜಿನಲ್ಲಿ ಓದಿದ್ದು, ಅಲ್ಲಿಗೂ ಸಹಾ ಐದೊಟ್ಟು ಮನೆಯಿಂದ ಓಡಾಡುತ್ತಿದ್ದೆ. ನನ್ನ ಸಹೋದರಿಯಾ ಸಹಾ ಶಾಲಾ ಕಾಲೇಜುಗಳಿಗೆ ಐದೊಟ್ಟು ಮನೆಯಿಂದಲೇ ಓಡಾಡುತ್ತಿದ್ದರು. ನಾನು ಮೊದಲು ಮತದಾನವನ್ನು ಇರ್ವತ್ತೂರಿನ ಶಾಲೆಯಲ್ಲಿ ಮಾಡಿರುತ್ತೇನೆ. ನನ್ನ ಅಂಕಪಟ್ಟಿಗಳು, ಮತದಾನದ ಗುರುತಿನ ಚೀಟಿ ಎಲ್ಲವೂ ಸಹಾ ಐದೊಟ್ಟುವಿನ ವಿಳಾಸವನ್ನು ಹೊಂದಿರುತ್ತದೆ. ನನ್ನ ತಂದೆ ಭತ್ತದ ಕೃಷಿ ಮಾಡುತ್ತಿದ್ದರು. ನಾನು ಅಡಿಕೆ ಸಸಿಗಳನ್ನು ಬ್ಯಾಂಕ್ ನಿಂದ ಸಾಲ ಪಡೆದು ನೆಟ್ಟಿರುತ್ತೇನೆ. ನೀರಾವರಿ ಸೌಲಭ್ಯವನ್ನು ಸಹಾ ಮಾಡಿರುತ್ತೇನೆ. ಸದರಿ ತೋಟವನ್ನು ನನ್ನ

ತಂದೆ ಮರಣ ಹೊಂದಿದ ನಂತರ ಮಾಡಿರುತ್ತೇನೆ. ನನ್ನ ತಂದೆ ಅಕ್ಟೋಬರ್ 2011 ರಲ್ಲಿ ಮರಣ ಹೊಂದಿರುತ್ತಾರೆ. ಅವರ ಅಭಿಷೇಕವು ಇರ್ವತ್ತೂರಿನಲ್ಲಿ ಆಗಿರುತ್ತದೆ. ಐದೊಟ್ಟು ಮನೆಯಲ್ಲಿ ಸುಮಾರು 4 – 5 ದೈವದೇವರುಗಳು ಇರುತ್ತದೆ. ಅದರ ವಿನಿಯೋಗ ಪುನಸ್ಕಾರಗಳನ್ನು ತಂದೆ ಮತ್ತು 1 ನೇ ಪ್ರತಿವಾದಿ ಸೇರಿಕೊಂಡು ಮಾಡುತ್ತಿದ್ದರು. 1 ನೇ ಪ್ರತಿವಾದಿಯು ಚಿಕ್ಕಬೆಟ್ಟುವಿನಲ್ಲಿ ಮತ್ತು ನನ್ನ ತಂದೆ ಐದೊಟ್ಟುವಿನಲ್ಲಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಎಲ್ಲರೂ ಒಟ್ಟಿಗೆ ಸೇರಿ ಮಾಡುತ್ತಿದ್ದರು. ಈಗ ನಾನು ಮತ್ತು ನನ್ನ ತಾಯಿ ಸೇರಿ ಪೂಜೆ ಪುನಸ್ಕಾರಗಳನ್ನು ಮಾಡುತ್ತೇವೆ. ನಮ್ಮ ಮನೆಯ ಡೋರ್ ಸಂಖ್ಯೆ ಯಾರ ಹೆಸರಿನಲ್ಲಿದೆ ಎಂದು ನನಗೆ ತಿಳಿದಿಲ್ಲ. ತೆರಿಗೆ ಪಾವತಿ ನಾನೇ ಮಾಡುತ್ತಿದ್ದೇನೆ. ವಿದ್ಯುಚ್ಚಕ್ತಿ ಬಿಲ್ಲುಗಳು ನನ್ನ ತಂದೆಯ ಹೆಸರಿನಲ್ಲಿರುತ್ತದೆ. ಸದರಿ ಬಿಲ್ಲನ್ನು ನಾನೇ ಪಾವತಿಸುತ್ತಿದ್ದೇನೆ. ಈಗ ನನಗೆ ಒಂದು ಫೋಟೋ ತೋರಿಸಿದ್ದು, ಅದು ನಮ್ಮ ಐದೊಟ್ಟುವಿನ ಜಾಗ ಎಂದರೆ ಸರಿಯಲ್ಲ. ಅದು ಎಲ್ಲಿಯ ಸ್ವತ್ತು ಎಂದು ನನಗೆ ತಿಳಿದಿಲ್ಲ. ಸದರಿ ಜಾಗವನ್ನು ನಾನು ನೋಡಿರಬಹುದು. ಅದರಲ್ಲಿ ಕಂಡು ಬರುವ ರಸ್ತೆ ಬೆಳುವಾಯಿಗೆ ಹೋಗುವ ರಸ್ತೆಯಾಗಿರುತ್ತದೆ ಎಂದರೆ ಇರಬಹುದು. ನನ್ನ ತಂದೆ ಮತ್ತು 1 ನೇ ಪ್ರತಿವಾದಿಯ ನಡುವೆ ಮೌಖಿಕವಾಗಿ ವಿಭಜನೆಯಾದ ಕಾರಣ ಐದೊಟ್ಟುವಿನಲ್ಲಿ ನಾವು ಪ್ರತ್ಯೇಕವಾಗಿ ಅಭಿವೃದ್ದಿಗಳನ್ನು ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸದರಿ ಮೌಖಿಕಎವಾಗಿ ವಿಭಜನೆಯಾದ ವಿಚಾರ ನನ್ನ ತಂದೆಯ ಎಲ್ಲಾ ಸಹೋದರ ಸಹೋದರಿಯರಿಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ.

ವಿಭಜನೆಯಾಗಿರುವುದಿಲ್ಲ. 1988 ರಲ್ಲಿ ನನಗೆ 5 ರಿಂದ 6 ವರ್ಷ ಇರಬಹುದು. ಆದ್ದರಿಂದ ಆ ಸಮಯದಲ್ಲಿ ಆದ ಮೌಖಿಕ ವಿಭಜನೆಯ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಹಾಗೆ ವಿಭಜನೆಯಾಗಿದ್ದಲ್ಲಿ ನನ್ನ ತಂದೆ ನನಗೆ ಹೇಳುತ್ತಿದ್ದರು. ವಿಭಜನೆ ಆದ ವಿಚಾರ ನನ್ನ ತಂದೆಗೆ ತಿಳಿದಿದ್ದು, ಈಗ ನಾನು ವಾದಿಯರೊಂದಿಗೆ ಸೇರಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ಮತ್ತು ಮೂಡಬಿದ್ರಿಯ ದಾವೆಯ ಸ್ವತ್ತುಗಳಿಗೆ ಸಂಬಂಧಿಸಿದಂತೆ ಹಲವಾರು ಬಾರಿ ರಾಜಿ ಪ್ರಕ್ರಿಯೆ ಆಗಿರುತ್ತದೆ ಎಂದರೆ ಸರಿ. ಕೊನೆಯ ಬಾರಿ ವಾದಿ ಪರ ವಕೀಲರಾದ ಎಂ.ಸಿ.ಕೆ. ಯವರ ಕಚೇರಿಯಲ್ಲಿ ಆಗಿರುತ್ತದೆ ಎಂದರೆ ಸರಿ. ಆ ಸಮಯದಲ್ಲಿ 1 ನೇ ಪ್ರತಿವಾದಿಯೂ ಹಾಜರಿದ್ದರು ಎಂದರೆ ಸರಿ. ಆ ಸಮಯದಲ್ಲಿ ನಮ್ಮ ಬೇಡಿಕೆ ಎಂದರೆ ಬೆಳ್ತಂಗಡಿಯ ಪ್ರಕರಣವನ್ನೂ ಸಹಾ ರಾಜಿ ಮಾಡಬೇಕು ಎಂದು ಇತ್ತು ಎಂದರೆ ಅದರ ಜೊತೆ ಬೇರೆ ಬೇರೆ ವಿಚಾರಗಳ ಬಗ್ಗೆಯೂ ಮಾತನಾಡಿರುತ್ತೇವೆ. ಸದರಿ ಬೆಳ್ತಂಗಡಿಯ ಪ್ರಕರಣ ನಮ್ಮ ಮತ್ತು 3 ನೇ ವ್ಯಕ್ತಿಯ ನಡುವೆ ಇತ್ತು ಎಂದರೆ ಅದರ ಬಗ್ಗೆ ನಾನು ಇಲ್ಲಿ ಹೇಳಲು ಆಗುವುದಿಲ್ಲ. ಈಗ ಮುಂದುವರಿದು ನಾವು ಕ್ರಯವರಿಸಿದ ಸ್ವತ್ತನ್ನು 1 ನೇ ಪ್ರತಿವಾದಿಯು ತೋರಿಸಿ, ಸ್ವತ್ತನ್ನು 3 ನೇ ವ್ಯಕ್ತಿಗೆ ಮಾರಾಟ ಮಾಡಿದ ಕಾರಣ ಸದರಿ ಪ್ರಕರಣದ ಬಗ್ಗೆ ಮಾತನಾಡಿದ್ದೇವೆ. ಹಾಗೆ 1 ನೇ ಪ್ರತಿವಾದಿಯ ವಿರುದ್ಧ ಸುಳ್ಳು ಆರೋಪ ಮಾಡಿದ ಕಾರಣ ಸದರಿ ರಾಜಿಯಾಗಿರುವುದಿಲ್ಲ ಎಂದರೆ

ಸರಿಯಲ್ಲ. ಬೆಳ್ತಂಗಡಿ ಪ್ರಕರಣ ಈಗ ಚಾಲ್ತಿಯಲ್ಲಿದೆ. ಅದರ ಬಗ್ಗೆ ಏನೂ ಮಾತನಾಡುವುದಿಲ್ಲ. ಸದರಿ ಪ್ರಕರಣದ ಆರ್ಡರ್ ಶೀಟ್, ವಾದ ಪತ್ರ, ಪ್ರತಿವಾದ ಪತ್ರ, ವಿಚಾರಣೆ ಮತ್ತು ಇತರೆ ದಾಖಲೆಗಳನ್ನು ತೋರಿಸಿದ್ದು, ಅದನ್ನು ಒಪ್ಪಿಕೊಂಡ ಕಾರಣ ಒಟ್ಟಾಗಿ ನಿಡಿ - 31 ಎಂದು ಗುರುತಿಸಲಾಯಿತು. ಬೆಳ್ತಂಗಡಿ ನ್ಯಾಯಾಲಯದಲ್ಲಿ ನಾವು ಸಲ್ಲಿಸಿರುವ ಅಸಲು ದಾವೆ 45/2022 ರ ಆರ್ಡರ್ ಶೀಟ್, ವಾದ ಪತ್ರ, ಪ್ರತಿವಾದ ಪತ್ರ, ಮತ್ತು ಅರ್ಜಿಗಳ ದೃಢೀಕೃತ ನಕಲುಗಳು ಮತ್ತು ಇತರೆ ದಾಖಲೆಗಳನ್ನು ತೋರಿಸಿದ್ದು, ಅವುಗಳನ್ನು ಒಪ್ಪಿಕೊಂಡ ಕಾರಣ ಒಟ್ಟಾಗಿ ನಿಡಿ - 32 ಎಂದು ಗುರುತಿಸಲಾಯಿತು. ನಿಡಿ - 31 ರಲ್ಲಿ ಇರುವಂತಹ ಪ್ರಕರಣ ಮುಗಿದು, ಮೇಲ್ಮನವಿ ಮುಗಿದರೂ ಸಹಾ ನಾನು ಸದರಿ ಪ್ರಕರಣ ಚಾಲ್ತಿಯಲ್ಲಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ಕಾರಣದಿಂದ ನಾವು ರಾಜಿಗೆ ಒಪ್ಪಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯರ ಜೊತೆ ಸೇರಿ 1 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದು, ರಾಜಿ ಕೂಡಾ ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ಜೈನರ ಉತ್ತರಾಧಿಕಾರ ಕಾಯ್ದೆ ಪ್ರಕಾರ ಜಿನ್ನಪ್ಪ ಹೆಗ್ಗಡೆಯವರ ಸ್ವತ್ತಿನಲ್ಲಿ ಇಬ್ಬರು ಗಂಡು ಮಕ್ಕಳಿಗೆ ಮಾತ್ರ ಹಕ್ಕು ಇರುತ್ತದೆ ಎಂದರೆ ಸರಿ. ಸದರಿ ಹಕ್ಕು ಇರುವ ಕಾರಣ, 1 ನೇ ಪ್ರತಿವಾದಿ ಮತ್ತು ನನ್ನ ತಂದೆಯ ನಡುವೆ ಮೌಖಿಕ

ವಿಭಾಗ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆಯ ತಾಯಿಗೆ ಜಿನ್ನಪ್ಪ ಹೆಗ್ಗಡೆಯವರ ಸ್ವತ್ತಿನಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ತಾಯಿಗೆ ಜಿನ್ನಪ್ಪ ಹೆಗ್ಗಡೆಯವರು ಬರೆದಿರುವಂತಹ ವೀಲುನಾಮೆಯ ಪ್ರಕಾರವಾಗಿ ಮಾತ್ರ ಪಾಲು ಇರುತ್ತದೆ ಎಂದರೆ ಅವರು ಯಾವುದೇ ವೀಲುನಾಮೆಯನ್ನು ಬರೆದಿರುವುದಿಲ್ಲ. ವಾದಿಯರ ಜೊತೆಗೆ ಸೇರಿ 1 ನೇ ಪ್ರತಿವಾದಿಯ ವಿರುದ್ಧ ನನ್ನ ಪ್ರತಿವಾದ ಪತ್ರ ಮತ್ತು ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಸುಳ್ಳು ಮತ್ತು ಮಾನಹಾನಿಕರ ವಿಚಾರಗಳನ್ನು ತಿಳಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯ ತಾಯಿಯವರಿಗೆ 3 ರಲ್ಲಿ 1 ಅಂಶದ ಹಕ್ಕು ಇದೆ ಎಂದು ವಾದಿಯ ಜೊತೆ ಸೇರಿ ಸುಳ್ಳು ಪ್ರತಿಪಾದಿಸುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರ ಪರ ನನ್ನ ಪಾಟೀ ಸವಾಲಿನಲ್ಲಿ ವಾದಿಯರಿಗೆ ಬೇಕಾಗುವ ಹಾಗೆ ಸುಳ್ಳು ವಿಚಾರಗಳನ್ನು ಮತ್ತು 1 ನೇ ಪ್ರತಿವಾದಿಯ ಮೇಲೆ ಸುಳ್ಳು ಆರೋಪಗಳನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆಯ ಸಹೋದರಿಯರಿಗೆ ಜಿನ್ನಪ್ಪ ಹೆಗ್ಗಡೆಯವರ ಸ್ವತ್ತಿನಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ತಂದೆಯವರು ಯಕ್ಷಗಾನ ಕಲಾವಿದರಾಗಿದ್ದರು. ಸನತ್ ಕುಮಾರ್ ಅಂದರೆ ಡಿಡಬ್ಲ್ಯೂ - 3 ರವರ ಜೊತೆ ಯಕ್ಷಗಾನ ಮಾಡುತ್ತಿದ್ದರು ಎಂದರೆ ಸರಿ. ಐದೊಟ್ಟುವಿನಲ್ಲಿ ವಾರ್ಷಿಕ ಮಾಲಕಾರ್ಯ ಆಗುವ ಸಮಯದಲ್ಲಿ

ಇರ್ವತ್ತೂರಿನ ಜನರನ್ನು ಕರೆಯುತ್ತಿದ್ದರು ಎಂದರೆ ಮೊದಲು ಕರೆಯುತ್ತಿದ್ದರು. ಆ ಸಮಯದಲ್ಲಿ ಡಿಡಬ್ಲ್ಯೂ - 2 ಮತ್ತು ಅವರ ಹೆಂಡತಿ ಬರುತ್ತಿದ್ದರು ಎಂದರೆ ಸರಿ. ನಾವು ಕೇಳಿರುವ ಪರಿಹಾರಗಳು ಕಾನೂನು ಬಾಹಿರವಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಸ್ಟುಡಿಯೋಗೋಸ್ಕರ ಬೆಳುವಾಯಿಯ ಒಂದು ಸ್ವತ್ತನ್ನು 7 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿಯಲ್ಲ. ಅದನ್ನು ನನ್ನ ತಂದೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಮಾಡಿರುವ ಕ್ರಯಪತ್ರದ ವಿರುದ್ಧ ನಾನು ಸಾಧನೆ ಮಾಡಲು ಅರ್ಹನಲ್ಲ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿಗೆ ಆದ ಕ್ರಯಚೀಟಿಯ ಬಗ್ಗೆ ನನ್ನ ತಾಯಿಗೆ, ನನ್ನ ಸಹೋದರಿಯರಿಗೆ ಎಲ್ಲರಿಗೂ ತಿಳಿದಿರುತ್ತದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ನಾವು 7 ವರ್ಷದ ನಂತರ ಸುಳ್ಳು ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ಸಮನ್ಸ್ ಬಂದ ನಂತರ 1 ನೇ ಪ್ರತಿವಾದಿ ಅದನ್ನು ನೀಡಿದ್ದೇವೆ ಎಂದು ಸುಳ್ಳು ಹೇಳಿದ್ದೇವೆ ಎಂದರೆ ಸರಿಯಲ್ಲ. ನಾನು 1 ನೇ ಪ್ರತಿವಾದಿಯೆಂದಿಗೆ ಕಂದಾಯ ಕೆಲಸಗಳನ್ನು ಮಾಡಿದ್ದೇನೆಎಂದುದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಜ್ಜನನ್ನು ಕೊಂದಂತಹ ಪ್ರಕರಣದ ದಾಖಲೆ 1 ನೇ ಪ್ರತಿವಾದಿಯ ಬಳಿ ಇದೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು 1 ನೇ ಪ್ರತಿವಾದಿಯ ನಡುವೆ 1988 ರಲ್ಲಿ ಆದಂತಹ ಮೌಖಿಕ ವಿಭಜನೆಯ ಪ್ರಕಾರ ಇರ್ವತ್ತೂರು ಮತ್ತು ಬೆಳುವಾಯಿ ಯ ಸ್ವತ್ತುಗಳನ್ನು ನನ್ನ ತಂದೆಯ ಪಾಲಿಗೆ ಮತ್ತು ಸಾಣೂರಿನ ಸ್ವತ್ತುಗಳು 1 ನೇ

ಪ್ರತಿವಾದಿಯ ಪಾಲಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ವಾದಿಗಳು ಸಲ್ಲಿಸಿರುವ ದಾವೆ ವಜಾವಾಗತಕ್ಕದ್ದು ಎಂದರೆ ಸರಿ. ಐದೊಟ್ಟುವಿನ ಸ್ವತ್ತು ಬೆಳುವಾಯಿಯ ಗಡಿಯಲ್ಲಿದೆ ಎಂದರೆ ಸರಿಯಲ್ಲ. ಅಂದಾಜು ಒಂದು ಕಿಲೋಮೀಟರ್ ಅಂತರದಲ್ಲಿದೆ.

<u>ಪಾಟೀ ಸವಾಲುಃ</u> ಶ್ರೀ ಜಿ.ಎಂ.ಬಿ., 7 ನೇ ಪ್ರತಿವಾದಿ ಪರ ವಕೀಲರಿಂದಃ

ನನ್ನ ತಂದೆ ಬಿಎಸ್ಸಿ ಓದಿರುತ್ತಾರೆ. ಅವರು ಆಂಗ್ಲ ಭಾಷೆಯಲ್ಲಿ ಸಹಿ ಮಾಡುತ್ತಿದ್ದರು. ನನ್ನ ರಜಾ ಅರ್ಜಿಗೆ, ನನ್ನ ಅಂಕಪಟ್ಟಿಗಳಿಗೆ ಅವರು ಸಹಿ ಹಾಕಿದ್ದನ್ನು ನಾನು ನೋಡಿದ್ದೇನೆ. ನನ್ನ ತಂದೆ ಸಹಿ ಮಾಡಿದ ದಾಖಲೆಗಳು ನನ್ನ ಬಳಿ ಇರುತ್ತದೆ. ಈಗ ನನಗೆ ಒಂದು ಕ್ರಯಪತ್ರ ನಿಪಿ - 28 ನ್ನು ತೋರಿಸಿದ್ದು, ಅದರಲ್ಲಿರುವ ಸಹಿ ನನ್ನ ತಂದೆಯದ್ದು ಎಂದರೆ ಸರಿ. ಅದನ್ನು 1 ನೇ ಪ್ರತಿವಾದಿ ಹೇಳಿದ ಹಾಗೆ ನನ್ನ ತಂದೆ ಸಹಿ ಮಾಡಿರುತ್ತಾರೆ. ನನ್ನ ಬಳಿ ಇರುವ ದಾಖಲೆಗಳಲ್ಲಿ ಎಂ.ಎಸ್.ಪಾಂಡಿ ಎಂದು ಸಹಿ ಮಾಡುತ್ತಿದ್ದರು ಎಂದು ನುಡಿಯುತ್ತೇನೆ. ನನ್ನ ತಂದೆ ಎಂ.ಎಸ್. ಪಾಂಡಿ ಎಂದು ಸಹಿ ಮಾಡುತ್ತಿದ್ದ ದಾಖಲೆಗಳು ನನ್ನ ಬಳಿ ಇದ್ದು, ಅದನ್ನು ಹಾಜರುಪಡಿಸಬಹುದು. ಅಚ್ಯುತ ಶಿವಪ್ಪ ಶೆಟ್ಟಿ ಯವರ ಹೆಸರಿನಲ್ಲಿರುವ ಪಹಣಿ ಪತ್ರಿಕೆಗಳು ನಿಪಿ - 27 ಎಂದು ಗುರುತಿಸಲಾಗಿದೆ ಎಂದರೆ ಅದನ್ನು ನಾನು ಈ ಮೊದಲು ನೊಡಿರುವುದಿಲ್ಲ.

ಸರ್ವೆ ನಂಬ್ರ 374 ಬೆಳುವಾಯಿ ಗ್ರಾಮದ 4 ಎಕರೆ 80 ಸೆಂಟ್ಸ್ ಸ್ವತ್ತು ಇದೆ ಎಂದು ಗೊತ್ತಿದ್ದು, ಎಲ್ಲಿದೆ ಎಂದು ನನಗೆ ತಿಳಿದಿಲ್ಲ. ಸದರಿ ಸ್ವತ್ತನ್ನು ನಾನು ಇಲ್ಲಿಯವರೆಗೆ ನೋಡಿರುವುದಿಲ್ಲ. ಆದ್ದರಿಂದ ಸದರಿ ಸ್ವತ್ತು ಯಾರು ಯಾರ ಸ್ವಾಧೀನದಲ್ಲಿದೆ ಎಂದು ನನಗೆ ತಿಳಿದಿಲ್ಲ. ನಾನು ಪ್ರತಿವಾದ ಪತ್ರ ಸಲ್ಲಿಸುವಾಗ ಸದರಿ ಸ್ವತ್ತನ್ನು ನೋಡಿರುವುದಿಲ್ಲ ಎಂದು ವಕೀಲರಿಗೆ ಮಾಹಿತಿಯನ್ನು ನೀಡಿರುವುದಿಲ್ಲ. ಅದರ ಬಗ್ಗೆ ವಿಚಾರ ಬರದ ಕಾರಣ ನಾನು ತಿಳಿಸಿರುವುದಿಲ್ಲ.

ಐದೊಟ್ಟು ಮನೆ ಹಂಚಿನ ಮನೆಯಾಗಿರುತ್ತದೆ. ಈಗ ನನಗೆ ತೋರಿಸಿದ ಫೋಟೋದಲ್ಲಿ ಕಾಣುತ್ತಿರುವುದು ನಮ್ಮ ಐದೊಟ್ಟು ಮನೆ ಎಂದು ಒಪ್ಪಿಕೊಂಡ ಕಾರಣ ಅದನ್ನು ನಿಡಿ - 33 ಎಂದು ಗುರುತಿಸಲಾಯಿತು. ಸದರಿ ಮನೆಗೆ ಬೆಳುವಾಯಿಯ ಮುಖಾಂತರ ಹೋಗುವಾಗ ಜಂಗರ ಬೆಟ್ಟು - ಗುಂಡುಕಲ್ಲು ರಸ್ತೆಯ ಮೂಲಕ ಹೋಗಬೇಕಾಗುತ್ತದೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ನಾನು ಅನೇಕ ಬಾರಿ ಓಡಾಡಿರುತ್ತೇನೆ. ಆ ಸಮಯದಲ್ಲಿ ಈಗ ತೋರಿಸಿದ ಫೋಟೋದಲ್ಲಿ ಕಾಣುತ್ತಿರುವ ಕಂಪೌಂಡ್ ಗೇಟ್ ಕಾಣುತ್ತಿದ್ದು, ನಾಗಮ್ಮ ಶಿವಪ್ಪ ಶೆಟ್ಟಿ ಕಂಪೌಂಡ್ ಎಂದು ಇರುತ್ತದೆ ಅದನ್ನು ಒಪ್ಪಿಕೊಂಡ ಕಾರಣ ನಿಡಿ - 34 ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ಫೋಟೋದಲ್ಲಿ ಕಾಣುವುದು ಜೀವನ್ ಶೆಟ್ಟಿಯವರು ಎಂದರೆ ಸರಿ. ಸದರಿ ಫೋಟೋವನ್ನು ಒಪ್ಪಿಕೊಂಡ ಕಾರಣ ನಿಡಿ - 35 ಎಂದು ಗುರುತಿಸಲಾಯಿತು.

ಶಿವಪ್ಪ ಶೆಟ್ಟಿ ಕಂಪೌಂಡ್ ಗೇಟ್ ನಿಂದ ನಮ್ಮ ಐದೊಟ್ಟು ಮನೆಗೆ ಸುಮಾರು ಅರ್ಧ ಕಿಲೋ ಮೀಟರ್ ಅಂತರವಿದೆ ಎಂದರೆ ಸರಿಯಲ್ಲ, ಸಮಾರು 1 ಕಿಲೋ ಮೀಟರ್ ಅಂತರವಿರುತ್ತದೆ. ಶಿವಪ್ಪ ಶೆಟ್ಟಿ ಕಂಪೌಂಡ್ ಸುತ್ತಲೂ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಶಿವಪ್ಪ ಶೆಟ್ಟಿಯವರ ಕಂಪೌಂಡ್ ಒಳಗಡೆ ನಾನು ಹೋಗಿರುವುದಿಲ್ಲ. ಶಿವಪ್ಪ ಶೆಟ್ಟಿ ಎಂದರೆ ಅಚ್ಯುತ ಶೆಟ್ಟಿಯವರ ತಂದೆ ಎಂದರೆ ಸರಿ.

ಪಾಟೀ ಸವಾಲನ್ನು ಮಧ್ಯಾಹ್ನ 3 ಗಂಟೆಗೆ ಮುಂದೂಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,
ಕಾರ್ಕಳ.

ಮಧ್ಯಾಹ್ನ 3.15 ಗಂಟೆಗೆ ಡಿಡಬ್ಲ್ಯೂ - 4 ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ಶ್ರೀ ಜಿ.ಎಂ.ಬಿ., 7 ನೇ ಪ್ರತಿವಾದಿ ಪರ ವಕೀಲರಿಂದಃ

ನಾನು ಸ್ಟುಡಿಯೋವನ್ನು 2005 ರಲ್ಲಿ ಮಾಡಿರುತ್ತೇನೆ. 3 ನೇ ಪ್ರತಿವಾದಿಯ ಮದುವೆಯು 2007 ರಲ್ಲಿ ಆಗಿರುತ್ತದೆ. ನನ್ನ ಮದುವೆ 2018 ರಲ್ಲಿ ಆಗಿರುತ್ತದೆ. ನನ್ನ ಸಹೋದರಿಯ ಮದುವೆ ಮತ್ತು ನನ್ನ ಮದುವೆಯು ದಿಬ್ಬಣ ಐದೊಟ್ಟು ಮನೆಯಿಂದ ಹೊರಟಿರುತ್ತದೆ ಎಂದರೆ ಸರಿ. ನನ್ನ ಅಕ್ಕನ ಮದುವೆಗೂ ಮತ್ತು ನನ್ನ ಸ್ಟುಡಿಯೋಗೂ ನನ್ನ ತಂದೆ 7 ನೇ ಪ್ರತಿವಾದಿಯಿಂದ ಹಣ ಪಡೆದಿದ್ದರು ಎಂದರೆ ಸರಿಯಲ್ಲ. ಹಾಗೆ ಹಣ ಪಡೆದ ಕಾರಣ ನಿಪಿ - 28 ರ ಪ್ರಕಾರ ಕ್ರಯಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಜೀವಂತ ಇರುವಾಗ ಅವರ ಸಹೋದರಿಯರ ಜೊತೆ ಒಳ್ಳೆಯ ಸಂಬಂಧ ಹೊಂದಿದ್ದರು ಎಂದರೆ ಸರಿ. ನನ್ನ ತಂದೆ ಮೃತಪಟ್ಟ ನಂತರ ನಾನು ಮತ್ತು ನನ್ನ ತಾಯಿ ನನ್ನ ಅತ್ತೆಯಂದಿರ ಜೊತೆ ಒಳ್ಳೆಯ ಸಂಬಂಧ ಹೊಂದಿದ್ದೆವು ಎಂದರೆ ಸರಿ.

ನಿಪಿ - 28 ಕ್ಕೆ ಒತ್ತಾಯಪೂರ್ವಕವಾಗಿ 1 ನೇ ಪ್ರತಿವಾದಿಯು ತನ್ನ ಸಹಿ ಪಡೆದಿದ್ದಾರೆ ಎಂದು ನನ್ನ ತಂದೆ ಮರಣ ಹೊಂದುವ ಸುಮಾರು 2 ರಿಂದ 3 ವರ್ಷದ ಪೂರ್ವದಲ್ಲಿ ತಿಳಿಸಿರುತ್ತಾರೆ. ನನ್ನ ತಂದೆ ಜೀವಂತ ಇರುವಾಗ ನಿಪಿ - 28 ದಾಖಲೆಯು ಸರಿ ಇರುವುದಿಲ್ಲ ಎಂದು ನನ್ನ ತಂದೆ ಎಲ್ಲಿಯೂ ಪ್ರಶ್ನಿಸಿರುವುದಿಲ್ಲ ಎಂದರೆ ನನಗೆ ತಿಳಿದಿರುವುದಿಲ್ಲ. ಈ ಪ್ರಕರಣ ದಾಖಲಿಸಿದ ನಂತರ ಅದರ ಬಗ್ಗೆ ತಿಳಿದುಕೊಳ್ಳಲು ನಾನು ಪ್ರಯತ್ನಿಸಿರುವುದಿಲ್ಲ. ನನ್ನ ತಂದೆ ಮರಣ ಹೊಂದಿದ ನಂತರ ಸದರಿ ಕ್ರಯಪತ್ರ ಸರಿ ಇರುವುದಿಲ್ಲ ಎಂದು ನಾನು ಪ್ರಶ್ನಿಸಿರುವುದಿಲ್ಲ.

1 ನೇ ಪ್ರತಿವಾದಿಯ ಮಕ್ಕಳ ಮದುವೆಯ ದಿಬ್ಬಣವು ಚಿಕ್ಕಬೆಟ್ಟು, ಸಾಣೂರಿನಿಂದ ಹೊರಟಿರುತ್ತದೆ ಎಂದರೆ ಸರಿ. ನಿಡಿ - 34 ರಲ್ಲಿ ಕಾಣುತ್ತಿರುವ ಕಂಪೌಂಡ್ ಬಹಳ ಹಳೆಯ ಕಂಪೌಂಡ್ ಮತ್ತು ಗೇಟ್ ಎಂದರೆ ನನಗೆ ಗೊತ್ತಿಲ್ಲ. ಸಾಕಷ್ಟು ವರ್ಷದಿಂದಲೂ ಅವುಗಳು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಕಂಪೌಂಡ್ ಒಳಗಿನ ಸ್ವತ್ತು ಅಚ್ಯುತ ಶಿವಪ್ಪ ಶೆಟ್ಟಿಯವರ ಸ್ವಾಧೀನದಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ - 28 ರಲ್ಲಿ ತೋರಿಸಿರುವಂತಹ ಸ್ವತ್ತಿಗೆ ಹೋಗಬೇಕಾದಲ್ಲಿ ನಿಡಿ - 34 ರಲ್ಲಿ ಕಾಣಿಸಿರುವ ಗೇಟನ್ನು ದಾಟಿ ಹೋಗಬೇಕು ಎಂದರೆ ಸರಿಯಲ್ಲ. ಸದರಿ ನಿಪಿ - 28 ರಲ್ಲಿ ತೋರಿಸಿರುವ ಸ್ವತ್ತಿಗೆ ಚೆಕ್ ಬಂದಿ ಏನು ಎಂದು ನನಗೆ ತಿಳಿದಿಲ್ಲ. ಆದ್ದರಿಂದ ಸದರಿ ಸ್ವತ್ತಿಗೆ ಹೋಗಬೇಕಾದರೆ

ಯಾರ ಸ್ವತ್ತಿನ ಮುಖಾಂತರ ಹೋಗಬೇಕು ಎಂದು ನನಗೆ ತಿಳಿದಿರುವುದಿಲ್ಲ ಎಂದರೆ ಸರಿಯಲ್ಲ. ವಿಶ್ವನಾಥ ಶೆಟ್ಟಿಯವರ ಸ್ವತ್ತಿನ ಮುಖಾಂತರ ಹೋಗಬೇಕಾಗುತ್ತದೆ. ವಿಶ್ವನಾಥ ಶೆಟ್ಟಿಯವರ ಸ್ವತ್ತಿನ ಸರ್ವೆ ನಂಬ್ರ ಅಥವಾ ಸದರಿ ಸ್ವತ್ತು ನಿಪಿ - 28 ರಲ್ಲಿ ನಮೂದಿಸಿರುವ ಸ್ವತ್ತಿನ ಯಾವ ದಿಕ್ಕಿನಲ್ಲಿದೆ ಎಂದು ನನಗೆ ತಿಳಿದಿಲ್ಲ. ಸದರಿ ನಿಪಿ - 28 ರಲ್ಲಿ ನಮೂದಿಸಿರುವ ಸ್ವತ್ತು ಮತ್ತು ವಿಶ್ವನಾಥ ಶೆಟ್ಟಿಯವರ ಸ್ವತ್ತುಗಳಿಗೆ ಹೋಗುವ ಜಾಗವು ಖಾಲಿ ಇರುತ್ತದೆ. ನಾನು ಯಾವಾಗಲೂ ನಿಪಿ - 28 ರಲ್ಲಿ ನಮೂದಿಸಿರುವ ಸ್ವತ್ತಿಗೆ ಹೋಗುತ್ತಿರುತ್ತೇನೆ. ನಾನು ಹೇಳುವ ಸ್ವತ್ತಿನಲ್ಲಿ ಯಾವುದೇ ಕಟ್ಟಡಗಳು ಇರುವುದಿಲ್ಲ. ಸದರಿ ಸ್ವತ್ತಿನಲ್ಲಿ ಈಗ ನನಗೆ ತೋರಿಸಿದ ಫೋಟೋದಲ್ಲಿರುವ ವಾಟರ್ ಟ್ಯಾಂಕ್ ಕಂಡು ಬರುವುದಿಲ್ಲ. ನಾನು ಹೇಳಿದ ಸದರಿ ಸ್ವತ್ತಿನಲ್ಲಿ ನನಗೆ ಸೇರಿರುವ ಒಂದು ಬೋರ್ ವೆಲ್ ಇರುತ್ತದೆ. ಎರಡು ಬೋರ್ ವೆಲ್ ಇರುವುದಿಲ್ಲ. ಅದಕ್ಕೆ ವಿದ್ಯುತ್ ಸಂಪರ್ಕ ಯಾರ ಹೆಸರಿನಲ್ಲಿರುತ್ತದೆ ಎಂದು ನನಗೆ ತಿಳಿದಿಲ್ಲ. ಸದರಿ ಸ್ವತ್ತಿನಲ್ಲಿ ಅಂದಾಜು 200 ಅಡಿಕೆ ಮರಗಳು ಮತ್ತು 7 – 8 ತೆಂಗಿನಮರಗಳು ಇರುತ್ತದೆ. ಅಡಿಕೆ ಮರಗಳಿಗೆ ಸುಮಾರು 5 – 6 ವರ್ಷಗಳಿರಬಹುದು. ತೆಂಗಿನ ಮರಗಳಿಗೂ ಸುಮಾರು 5 – 6 ವರ್ಷ ಪ್ರಾಯವಾಗಿರಬಹುದು. ಅದಕ್ಕೆ ನೀರಾವರಿ ವ್ಯವಸ್ಥೆ ನಮ್ಮ ಬೋರ್ ವೆಲ್ ಮೂಲಕ ಆಗುತ್ತದೆ. ಅದರ ಮೂಲಕ ನೀರನ್ನು ನಾವು ಬಿಡುತ್ತೇವೆ. ಬೋರ್ ವೆಲ್ ಗೆ ವಿದ್ಯುತ್ ಸಂಪರ್ಕ ನಮ್ಮವರ ಹೆಸರಿನಲ್ಲಿ ಇದ್ದು, ನಾನು ಅದರ ಬಗ್ಗೆ ವಿಚಾರಿಸಿರುವುದಿಲ್ಲ. ಬೋರ್ ವೆಲ್ ನ್ನು ನಮ್ಮ ಸಂಬಂಧಿಕರಾದ ರಂಜಿತ್

ರವರ ಮುಖಾಂತರ ಸುಮಾರು 5 – 6 ವರ್ಷಗಳ ಹಿಂದೆ ತೋಡಲಾಗಿದೆ. ಅದಕ್ಕೆ ಹಣವನ್ನು ನಾವೆಲ್ಲರೂ ಸೇರಿ ನೀಡಿದ್ದು, ಅದಕ್ಕೆ ಅಂದಾಜು 1 ಲಕ್ಷ ರೂಗಳು ಆಗಿರುತ್ತದೆ. ನನ್ನ ತಾಯಿ ಹಣ ನೀಡಿರುತ್ತಾರೆ. ನಮ್ಮ ಸ್ವತ್ತಿನಲ್ಲಿ ಹಟ್ಟಿ ಮತ್ತು ಕೊಟ್ಟಿಗೆ ಇರುವುದಿಲ್ಲ. ನನ್ನ ಪ್ರಕಾರ 4.80 ಎಕರೆ ಸ್ವತ್ತಿನಲ್ಲಿ ಒಂದು ಕಟ್ಟಡ, ಒಂದು ವಾಟರ್ ಟ್ಯಾಂಕ್, ಎರಡು ಬೋರ್ ವೆಲ್ ಮತ್ತು ಹಟ್ಟಿ ಕೊಟ್ಟಿಗೆ ಇರುವಂತಹ ಸ್ಥಳದಲ್ಲಿ ನಾನು ಹಕ್ಕು ಕೇಳುತ್ತಿಲ್ಲ ಎಂದರೆ, ನಮ್ಮ ಸ್ವತ್ತಿನಲ್ಲಿ ಅವುಗಳು ಇದ್ದರೆ ಅವುಗಳು ನಮ್ಮ ಹಕ್ಕಿಗೆ ಸೇರತಕ್ಕದ್ದು ಎಂದು ನುಡಿಯುತ್ತೇನೆ. ಅಂದರೆ ನಾವು ವಾಟರ್ ಟ್ಯಾಂಕ್ , ಕಟ್ಟಡ , ಬೋರ್ ವೆಲ್ ಮತ್ತು ಹಟ್ಟಿ ಕೊಟ್ಟಿಗೆ ಕಟ್ಟುವ ಸಮಯದಲ್ಲಿ ಯಾವುದೇ ಆಕ್ಷೇಪ ಮಾಡಿರುವುದಿಲ್ಲ ಎಂದರೆ , ನಮ್ಮ ಸ್ವತ್ತಿನಲ್ಲಿ ಅವುಗಳನ್ನು ಕಟ್ಟಿರುವುದಿಲ್ಲ. ಸದರಿ 4.80 ಎಕರೆ ಸ್ವತ್ತಿನಲ್ಲಿ ಏನೇನು ಇರುತ್ತದೆ ಎಂದು ಪಿಡಬ್ಲ್ಯೂ - 2 ರವರಿಗೂ ತಿಳಿದಿರುತ್ತದೆ. ತೋಟದ ಕೆಲಸಗಾರರಿಗೆ ನಾವು ವೇತನ ನೀಡಿದ ಬಗ್ಗೆ ದಾಖಲೆಗಳು ಇರುವುದಿಲ್ಲ. ಬೋರ್ ವೆಲ್ ತೋಡಿಸಿದ ಬಗ್ಗೆ ಪಿಡಬ್ಲ್ಯೂ - 2 ರವರ ಬಳಿ ದಾಖಲೆಗಳು ಇರುತ್ತದೆ. ನಮ್ಮ ಬಳಿ ಇರುವುದಿಲ್ಲ. ನಿಪಿ - 28 ರಲ್ಲಿ ನಮೂದಿಸಿರುವಂತಹ 4.80 ಎಕರೆ ಸ್ವತ್ತು 7 ನೇ ಪ್ರತಿವಾದಿಯ ಸ್ವಾಧೀನದಲ್ಲಿದ್ದು, ಅವರು ಹೇರಳವಾಗಿ ಅಭಿವೃದ್ಧಿ ಮಾಡಿದ್ದಾರೆ ಎಂದು ನಮಗೆ ತಿಳಿದಿದೆ ಎಂದರೆ ಸರಿಯಲ್ಲ. ನನ್ನ ತಂದೆ ಸಂಪೂರ್ಣ ಕ್ರಯದ ಮೊಬಲಗನ್ನು 7 ನೇ ಪ್ರತಿವಾದಿಯಿಂದ ಪಡೆದಿದ್ದರೂ ಸಹಾ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸ್ವತ್ತಿನ ತೀರ್ವೆಯನ್ನು ನಾನು ಕಟ್ಟಿರಬಹುದು. ಅದರ ರಶೀದಿ ಹಾಜರುಪಡಿಸಬಹುದು.

ಯಾವ ವರ್ಷದಿಂದ ಕಟ್ಟುತ್ತಿದ್ದಾರೆ ಎಂದು ನನಗೆ ತಿಳಿದಿಲ್ಲ. ನನ್ನ ತಾಯಿ ಕಟ್ಟುತ್ತಿದ್ದಾರೆ. 7 ನೇ ಪ್ರತಿವಾದಿ ನಿಪಿ - 28 ರ ಪ್ರಕಾರ ಅದರಲ್ಲಿ ನಮೂದಿಸಿರುವ ಸ್ವತ್ತಿನ ಪ್ರಾಮಾಣಿಕ ಖರೀದಿದಾರರು ಎಂದರೆ ಸರಿಯಲ್ಲ. ನನ್ನ ತಂದೆ 1 ನೇ ಪ್ರತಿವಾದಿಯಿಂದ ನೋಟರಿ ಮುಖಾಂತರ ಜಿ.ಪಿ.ಎ. ಪಡೆದುಕೊಂಡು ಕ್ರಯಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ವಾದಿಯರ ಜೊತೆ ಸೇರಿ 7 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಅಥವಾ ವಾದಿಯರು ಹೇಳಿದ ಹಾಗೆ ದಾವಾ ಸ್ವತ್ತುಗಳು ಪಾಲಾಗತಕ್ಕ ಸ್ವತ್ತುಗಳಲ್ಲ ಎಂದರೆ ಸರಿಯಲ್ಲ. ನಿಪಿ - 28 ರಲ್ಲಿ ನಮೂದಿಸಿರುವ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿಯು ಸ್ವಂತವಾಗಿ ಖರೀದಿಸಿದ ಸ್ವತ್ತು ಮತ್ತು ನಿಪಿ - 28 ರಲ್ಲಿ ಕಾಣಿಸಿದ 4.80 ಎಕರೆ ಸ್ವತ್ತು ಒಂದಕ್ಕೊಂದು ತಾಗಿಕೊಂಡು ಇರುತ್ತದೆ ಎಂದರೆ ಸರಿ. ಅವುಗಳ ಮಧ್ಯೆ ಯಾವುದೇ ಆವರಣ ಗೋಡೆಗಳು ಇರುವುದಿಲ್ಲ. ವಾದಿಯರು ನನಗೆ ಪಾಟೀ ಸವಾಲು ಮಾಡುವ ಸಮಯದಲ್ಲಿ ನಾನು ಅವರೊಂದಿಗೆ ಸೇರಿ ಕ್ರಯಪತ್ರದ ಬಗ್ಗೆ ವಾದಿಗೆ ಬೇಕಾದ ಹಾಗೆ ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿಯಲ್ಲ. ಸದರಿ ಸ್ವತ್ತಿನಲ್ಲಿ ನಾವು ಯಾವುದೇ ಅಭಿವೃದ್ಧಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ - 28 ರಲ್ಲಿ ನಮೂದಿಸಿರುವ ಸ್ವತ್ತಿನಲ್ಲಿ ನಾವು ಅಭಿವೃದ್ಧಿ ಮಾಡಿದ್ದೇವೆ ಮತ್ತು ಸದರಿ ಸ್ವತ್ತಿನ ಸ್ವಾದೀನದಲ್ಲಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,
ಕಾರ್ಕಳ.